ಚಿಂತಾಮಣಿ ತಾಲ್ಲೂಕಿನಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ

1470(1857) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂತಾಮಣಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಕೋರ್ಲಪರ್ತಿ ಗ್ರಾಮದಲ್ಲಿ ಕಪ್ಪುಹಲಗೆ ಯೋಜನೆಯಡಿಯಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳು ಮಂಜೂರಾಗಿದ್ದರೂ, ನಿರ್ಮಾಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಮಂಜೂರಾಗಿದ್ದರೂ ಸಹ ಕಾರ್ಯಗತ ಆಗದೇ ಇರುವುದಕ್ಕೆ ಕಾರಣಗಳು ಏನು?

ಇ. ಶಾಲಾ ಕೊಠಡಿಗಳನ್ನು ಶೀಘ್ರವಾಗಿ ಕಟ್ಟಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಪ್ರೋ. ಬಿ. ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಕೊರಲಪರ್ತಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕಪ್ಪುಹಲಗೆ ಯೋಜನೆಯಡಿಯಲ್ಲಿ, 2 ಶಾಲಾ ಕೊಠಡಿಗಳು ಮಂಜೂರಾಗಿದ್ದು, ತಲಾ ಘಟಕ ವೆಚ್ಚ ರೂ. 1.10 ಲಕ್ಷದಂತೆ ಒಟ್ಟು ರೂ. 2.20 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿರುತ್ತದೆ, ಸದರಿ ಶಾಲೆಯಲ್ಲಿ ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಶಾಲಾ ಕೊಠಡಿಗಳನ್ನು ನಿರ್ಮಿಸಿರುವುದಿಲ್ಲ. ಈ ಹಣ ತಾಲ್ಲೂಕು ಪಂಚಾಯತ್ ಚಿಂತಾಮಣಿರವರ ವಶದಲ್ಲಿರುತ್ತದೆ. ಈಗಾಗಲೇ ನಿವೇಶನ ಒದಗಿಸಿಕೊಡುವಂತೆ ಎಸ್.ಡಿ.ಎಂ.ಸಿ. ಅಧ್ಯಕ್ಷರನ್ನು/ಸದಸ್ಯರನ್ನು ಕೋರಲಾಗಿರುತ್ತದೆ. ಆದರೆ ಇದುವರೆವಿಗೂ ಎಸ್.ಡಿ. ಎಂ.ಸಿ. ಯವರು ನಿವೇಶನ ಒದಗಿಸಿಕೊಟ್ಟಿರುವುದಿಲ್ಲ. ನಿವೇಶನ ಒದಗಿಸಿದ ಕೂಡಲೇ ಶಾಲಾಕೊಠಡಿಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ. ಸದರಿ ಶಾಲೆಯಲ್ಲಿ ನಿವೇಶನ ಲಭ್ಯವಿಲ್ಲದ ಕಾರಣ ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ.

ಇ. ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ಶಿಕ್ಷಕರಿಗೊಂದು ಕೊಠಡಿಯನ್ನು ಒದಗಿಸುವ ಉದ್ದೇಶದಿಂದ ವಿವಿಧ ಯೋಜನೆಗಳಡಿಯಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ/ಕೈಗೊಳ್ಳಾಗುತ್ತಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿಯೂ ಸಹ ಪ್ರತಿ ವರ್ಷವೂ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ನರ್ಸಿಂಗ್ ಶಾಲೆಗಳ ಸ್ಥಾಪನೆ

1471(1524) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಡುಪಿ ಜಿಲ್ಲೆಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರುವಂತೆ ಸರ್ಕಾರಿ ಶುಶ್ರೂಷಕರ ತರಭೇತಿ ಶಾಲೆ, ಲ್ಯಾಬ್‌ಟೆಕ್ನಿಷಿಯನ್, ಎಕ್ಸ್‌ರೇ ಟೆಕ್ನಿಷಿಯನ್ ಮತ್ತು ಫಾರ್ಮಸಿ ಶಾಲೆಗಳನ್ನು ಮಂಜೂರು ಮಾಡಲಾಗುವುದೆ?

ಆ. ಉಡುಪಿ ಜಿಲ್ಲೆಯಲ್ಲಿ ಖಾಸಗಿ ನರ್ಸಿಂಗ್ ಶಾಲೆಗಳು ಅಸ್ತಿತ್ವದಲ್ಲಿದ್ದು, ಸರ್ಕಾರಿ ನರ್ಸಿಂಗ್ ಶಾಲೆಯ ಅಗತ್ಯವಿರುವುದರಿಂದ 1998ರಲ್ಲಿ ಸರ್ಕಾರ ತೆಗೆದುಕೊಂಡ (5 ವರ್ಷಗಳ ಅವಧಿಗೆ ನರ್ಸಿಂಗ್ ಶಾಲೆಗಳ ಮಂಜೂರಾತಿ ನಿಷೇಧ) ನಿರ್ಣಯವನ್ನು ಸಡಿಲಿಸಬಹುದೆ?